**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 07.08.2025

<u>ಮುಂದುವರೆದ ಪಾಟೀ ಸವಾಲುಃ 6 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ</u>

ನನ್ನ ತಂದೆ ಚೌಡೇಗೌಡರು ಸರ್ವೆ ನಂ.10/1, 10/2, 10/3 ಹಾಗೂ 13/1 ಸ್ವತ್ತುಗಳನ್ನು ಖರೀದಿಸುವ ಸಂದರ್ಬದಲ್ಲಿ ನಾಲಾಗೆ ಮತ್ತು ಮನೆ ನಿರ್ಮಾಣಕ್ಕಾಗಿ 23 ಗುಂಟೆ ಜಮೀನು ಹೋಗಿರುವುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯವರು ಮೇಲಿನ ಸ್ವತ್ತುಗಳನ್ನು ಖರೀದಿಸುವ ಸಂದರ್ಬದಲ್ಲಿ ಅವುಗಳ ಅಳತೆಗಳನ್ನು ಮಾಡಿಸಿರುತ್ತಾರೆ. ನನ್ನ ತಂದೆ ಸ್ವತ್ತುಗಳನ್ನು ಖರೀದಿಸುವ ಸಂದರ್ಬದಲ್ಲಿ ಅಳತೆ ಮಾಡಿಸಿದಾಗ ಮೇಲಿನ ಸರ್ವೆ ನಂಬರ್ ಗಳ ಒಟ್ಟು ವಿಸ್ತೀರ್ಣ 1 ಎಕರೆ ಸರಿ ಇತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರಿ ಇತ್ತು ಎಂದು ನುಡಿಯುತ್ತಾರೆ. ಸದರಿ ಅಳತೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು ತೆಗೆದುಕೊಂಡಿರುವುದಿಲ್ಲ. ಸದರಿ ಅಳತೆಯ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ.

ತಹಶೀಲ್ದಾರ್ ನ್ಯಾಯಾಲಯಕ್ಕೆ ಯಾವ ಕಾರಣಕ್ಕಾಗಿ ಕೇಸನ್ನು ದಾಖಲಿಸಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು 29 ಗುಂಟೆ ಮಾತ್ರ ನನ್ನ ತಂದೆ ಹೆಸರಿಗೆ ಖಾತೆಯಾಗಿದ್ದು ಉಳಿದ 11 ಗುಂಟೆ ಖಾತೆ ಆಗದೆ ಇರುವ ಕಾರಣ ಕೇಸನ್ನು ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ಕೇಸು ಏನು ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೇಲಿನ ಸರ್ವೆ ನಂಬರ್ ಗಳು ಹಾಗೂ ವಿಸ್ತೀರ್ಣ ತಾಳೆ ಇಲ್ಲದ ಕಾರಣ ಉಪವಿಭಾಗಾದಿಕಾರಿಗಳ ನ್ಯಾಯಾಲಯಕ್ಕೆ ಮೋರೆ ಹೋಗುವಂತೆ ತಹಶೀಲ್ದಾರ್ ರವರು ಹಿಂಬರಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಾನಾ R.Mis 19/2008-09 ರಂತೆ ನಾನು ಪ್ರಕರಣವನ್ನು ದಾಖಲಿಸಿದ್ದೇನು ಎಂದರೆ ಸರಿ. ಸದರಿ ಪ್ರಕರಣ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ.

ಮೇಲೆ ಹೇಳಿದ ಸರ್ವೆ ನಂಬರ್ ಗಳ ಒಟ್ಟು ವಿಸ್ತೀರ್ಣ 1 ಎಕರೆಯ ಚೆಕ್ಕು ಬಂದಿ ಹೇಳಲು ಬರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೇಳಲು ಬರುತ್ತದೆ ಎಂದು ನುಡಿಯುತ್ತಾರೆ. ಪೂರ್ವಕ್ಕೆ - ನರಸಯ್ಯನವರ ಜಮೀನು, ಪಶ್ಚಿಮಕ್ಕೆ ಜಿಗುಳು ಮತ್ತು ರಸ್ತೆ. ಉತ್ತರಕ್ಕೆ - ಸರ್ವೆ ನಂ.13/1 ರ ಜಮೀನು, ದಕ್ಷಿಣಕ್ಕೆ - ಮೂಳೇಗೌಡ ಹಾಗೂ ಬಸವೇಗೌಡರ ಉಳಿಕೆ ಜಮೀನು. ಉತ್ತರಕ್ಕೆ ಸರ್ವೆ ನಂ.13/1 ರ ಜಮೀನು ಸಮೇತ ಪ್ರತಿವಾದಿಯರಿಗೆ ಸೇರಿದ ಮನೆ ಹಾಗೂ ಉಳಿಕೆ ಜಮೀನು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ನಾನು ಏನು ಪರಿಹಾರ ಕೋರಿರುತ್ತೇನೆ ಎಂದು ನನಗೆ ಗೊತ್ತಿರುತ್ತದೆ. ಈ ದಾವೆಯಲ್ಲಿ ನಾನು ತಹಶೀಲ್ದಾರ್ ರವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಮೇಲೆ ತಿಳಿಸಿದ ಸರ್ವೆ ನಂಬರ್ ಗಳಲ್ಲಿ ಇರುವ ಒಟ್ಟು ವಿಸ್ತೀರ್ಣ 29 ಗುಂಟೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆ ಸೃಷ್ಟಿಸಿ ಅದು 1 ಎಕರೆ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ನಿಖರವಾದ ಪೋಡುಗಳು ಹಾಗೂ ಅದರ ನಿಖರವಾದ ವಿಸ್ತೀರ್ಣ ಹಾಗೂ ಅದರ ನಿಖರವಾದ ಚೆಕ್ಕು ಬಂದಿಯನ್ನು ನಮೂದು ಮಾಡದೆ ಇರುವ ಕಾರಣ ನಾನು ಘೋಷಾಣಾತ್ಮಕ ಪರಿಹಾರ ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು 29 ಗುಂಟೆ ಜಮೀನನ್ನು ಮಾತ್ರ ಖರೀದಿಸಿರುವ ಕಾರಣ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಇದ್ದ ಪ್ರಕರಣಗಳು ಆ ಕಾರಣಕ್ಕಾಗಿಯೇ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಉಳಿದ ಪ್ರತಿವಾದಿ ಪರ ವಕೀಲರಿಂದಃ</u>

ಉಳಿದ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಉಳಿದ ಪ್ರತಿವಾದಿಯರ ಪರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.